

## ಜಾಣ ಪತಿ

ನಾನು ನನ್ನ ಪತಿ ಸಿನಿಮಾ ನೋಡಿಕೊಂಡು ಸ್ಕೂಟರ್‌ನಲ್ಲಿ ಮನೆಗೆ ಬರುತ್ತಿದ್ದೆವು. ಮಾರ್ಗಮಧ್ಯದಲ್ಲಿ ದೊಡ್ಡದೊಡ್ಡ, ತಾಜಾ ಪೇರಲೆ ಹಣ್ಣು ಕಂಡವು. ನಾನು ಕೂಡಲೇ ಸ್ಕೂಟರ್ ಇಳಿದು ಹಣ್ಣು ಕೊಳ್ಳಲು ನಿಂತೆ. ಅವರು ರಸ್ತೆ ಬದಿಯಲ್ಲಿಯೇ ಸ್ಕೂಟರ್ ನಿಲ್ಲಿಸಿಕೊಂಡು ನಿಂತಿದ್ದರು. ಚೌಕಾಸಿ ಮಾಡುತ್ತ ತುಸು ಸಮಯವಾಯಿತು. ತಡವಾದ್ದರಿಂದ ಅವರೇ ಸ್ಕೂಟರ್ ಇಳಿದು ಹಣ್ಣಿನವಳ ಬಳಿ ಬಂದರು. ಅಷ್ಟೊತ್ತು ನನ್ನ ಹಾಗೂ ಹಣ್ಣು ಮಾರುವವಳ ನಡುವೆ ವಾಗ್ವಾದ ನಡೆದೇ ಇತ್ತು. 'ಐವತ್ತು ರೂಪಾಯಿಗೆ ಎರಡು ಹಣ್ಣು' ಎಂದು ಅವಳೆಂದರೆ, 'ಮೂರು ಹಣ್ಣು ಕೊಡು' ಎಂದು ನಾನು. ಕೊನೆಗೂ ಅವಳೇ ಸೋತು ಚೀಲಕ್ಕೆ ಮೂರು ಹಣ್ಣು ಹಾಕುವುದಕ್ಕೂ, ಪತಿ ಮಧ್ಯೆ ಪ್ರವೇಶಿಸುವುದಕ್ಕೂ ಸರಿ ಹೋಯ್ತು.'ಅಯ್ಯೊ ಮೂರು ಹಣ್ಣು ಯಾಕಮ್ಮ, ನಾವಿರೋದು ಇಬ್ಬರೇ, ಎರಡು ಹಣ್ಣು ಕೊಡು ಸಾಕು' ಎಂದವರೇ ಚೀಲದಿಂದ ಒಂದು ಹಣ್ಣನ್ನು ಎತ್ತಿ ಅವಳ ಬುಟ್ಟಿಗೆ ಹಾಕಿ ಐವತ್ತು ರೂಪಾಯಿಯನ್ನು ಅವಳಿಗೆ ಕೊಟ್ಟರು. ಅಷ್ಟೊ ಹೊತ್ತು ನನ್ನ ಚೌಕಾಸಿಯ ಶ್ರಮ ವ್ಯರ್ಥವಾಗಿ ನಾನು ಮುಖ ಊದಿಸಿಕೊಂಡು ಮನೆಗೆ ಬಂದೆ!

**ಸುವರ್ಣ ಮಠ**

## ಅದಲು-ಬದಲು

ನನ್ನ ತಾಯಿ ಮನೆಯಿಂದ ಆಚೆ ಹೋಗುವಾಗ ನನ್ನ ಕೈಗೆ 200 ರೂಪಾಯಿ ಕೊಟ್ಟು, 'ಮಾಲಾ ಬಂದರೆ ಇದನ್ನು ಕೊಡು' ಎಂದು ಹೇಳಿದಳು. ನಂತರ ಸ್ವಲ್ಪ ಸಮಯದ ಬಳಿಕ ಎದುರು ಮನೆಯ ಪುಟ್ಟ ಹುಡುಗಿ ಮಾಲಾ ಬಂದು ತನ್ನ ಹುಟ್ಟುಹಬ್ಬದ ಸಿಹಿ ಕೊಟ್ಟಳು. ಅವಳಿಗೆ 'ಹ್ಯಾಪಿ ಬರ್ತ್‌ಡೇ' ಹೇಳಿ 200 ರೂಪಾಯಿ ಕೊಟ್ಟೆ. ಅವಳು 'ಥ್ಯಾಂಕ್ಸ್' ಹೇಳಿ ಹೋದಳು. ನಂತರ ನಮ್ಮ ಅಮ್ಮ ಬಂದಳು. ಅವಳ ಹಿಂದೆಯೇ ಇಸ್ತ್ರೀ ಅಂಗಡಿಯ ಮಾಲಾ ಕೂಡ ಬಂದಳು. 'ಅಮ್ಮೋರೆ, ಅಡ್ವಾನ್ಸ್ ಬೇಕಿತ್ತು ಅಂತ ಕೇಳಿದ್ನಲ್ಲ...' ಎಂದಳು. ಆಗ ಅಮ್ಮ, 'ಶಾಂತಿ, ಮಾಲಾ ಬಂದ್ರೆ ಕೊಡು ಅಂತ ದುಡ್ಡು ಕೊಟ್ಟು ಹೋಗಿದ್ನಲ್ಲ, ತಾ ಇಲ್ಲಿ' ಎಂದಳು. ನಾನು ತಬ್ಬಿಬ್ಬಾದೆ. ಪಕ್ಕದ ಮನೆಯ ಮಾಲಾಳಿಗೆ ಹಣ ಕೊಟ್ಟಿದ್ದು ಹೇಳಿದೆ. ಅಮ್ಮ ಬೈದಳು. ನನಗೇನು ಗೊತ್ತು ಇಬ್ಬರೂ ಮಾಲಾಗಳು ಒಂದೇ ದಿನ ಬರುತ್ತಾರೆ ಅಂತ... ಇನ್ಮೇಲೆ ಈ ಮಾಲಾಳನ್ನು 'ಇಸ್ತ್ರಿ ಮಾಲಾ' ಅಂತ ಕರಿ ಎಂದು ಹೇಳಿ ಅಮ್ಮನ ಬಾಯಿ ಮುಚ್ಚಿಸಿದೆ.



**ಉಷಾ ಪ್ರಸಾದ್**